## ಜತೆಯಾದ ‘ಜೊತೆ ಜೊತೆಯಲಿ’

ವೇಷ–ಭೂಷಣಗಳಿಂದ ವೈಭವೀಕರಿಸಿ ಮಹಿಳೆಯರ ನಿರೀಕ್ಷೆಗಳ ದೃಷ್ಟಿಕೋನದಲ್ಲಿ ಕಥೆ ಹೆಣೆದು ಉಣಬಡಿಸುವುದೇ ಧಾರಾವಾಹಿ ಆಗಬಾರದು. ಸಮಾಜಕ್ಕೆ ಬೆಳಕು ಚೆಲ್ಲುವ ಉತ್ತಮ ಆಶಯಗಳು ಕೊಡುವಂತಹ ಧಾರಾವಾಹಿಗಳು ಇತ್ತೀಚೆಗೆ ತೀರ ಕಡಿಮೆಯಾಗಿವೆ. ಮರುಭೂಮಿಯಲ್ಲಿ ಓಯಸಿಸ್ ಕಂಡ ಹಾಗೆ ‘ಝೀ’ನ ‘ಜೊತೆ ಜೊತೆಯಲಿ’ ಧಾರಾವಾಹಿ ಉತ್ತಮ ಆಶಯದಿಂದ ರೂಪಿತವಾದಂತಿದೆ. ನಾಯಕ ಆರ್ಯವರ್ಧನ್ ಕಾರ್ಪೊರೇಟ್ ವಲಯದ ಶ್ರೀಮಂತ ಉದ್ಯಮಿ. ಮಧ್ಯಮ ವರ್ಗ, ಬಡವರ ಬಗ್ಗೆ ಅಭಿಮಾನ, ಅನುಕಂಪ ಹೊಂದಿದ್ದಾರೆ. ಮಧ್ಯಮ ವರ್ಗದವರಿಂದಲೇ ಒಂದು ಉದ್ಯಮ ಬೆಳೆಯುವುದು ಎನ್ನುವ ವಾಸ್ತವ ಸಂಗತಿಯನ್ನು ಇಲ್ಲಿ ನಿರೂಪಿಸಿದ್ದಾರೆ. ಬಡವರ ಜತೆಗಿನ ನಾಯಕನ ಒಡನಾಟದ ವಿಶೇಷತೆಯೂ ಧನಾತ್ಮಕ ಅಂಶ. ಅವರ ನಡುವೆ ಇದ್ದು ಅವರ ಆದಾಯ, ಖರ್ಚು–ವೆಚ್ಚಗಳೇನು ಎಂಬುದನ್ನು ಅರಿತು ಅವರ ಅಗತ್ಯದ ಉತ್ಪನ್ನಗಳನ್ನು ತಲುಪಿಸುವುದು ಉತ್ತಮ ಸಂದೇಶ ನೀಡುತ್ತದೆ. ನಾಯಕ ಆರ್ಯವರ್ಧನ್ ಪಾತ್ರದಲ್ಲಿ ಅನಿರುದ್ಧ್ ಬಹಳ ಪ್ರಬುದ್ಧವಾಗಿ ಅಭಿನಯಿಸಿದ್ದಾರೆ.

–ಉಮೇಶ್ ಆಚಾರ್ಯ, ಕೊಳಂಬೆ

ಬಹುಬೇಗ ಮುಕ್ತಾಯವಾಗಲಿ: ‘ಜೊತೆ ಜೊತೆ’ ನಾಯಕ ಆರ್ಯವರ್ಧನ್ ಕೋಟ್ಯಧಿಪತಿ. ಆದರೂ ಒಂದು ದಿನದಲ್ಲಿ ಪರಿಚಯವಾದ ನಾಯಕಿ ಅನುಳ ಬಗ್ಗೆ ವಹಿಸುವ ಮುತುವರ್ಜಿ ಅಸಹಜ. ಅವರ ಮನೆಗೆ ಹೋಗಿ ಅವಳಿಲ್ಲದಾಗ ಫ್ರಿಜ್ ರಿಪೇರಿ ಮಾಡುವುದೂ, ಅವಳಿಗೆ ಬ್ಲಾಂಕ್ ಚೆಕ್ ಕೊಡುವುದು, ಪಾರ್ಟಿಗೆ ಕರೆಯುವುದು, ಅವಳ ಜೊತೆ ಬೀದಿಗಳಲ್ಲಿ ಪಾರ್ಟಿ ಮಾಡುವುದೂ, ತನ್ನ ಕಚೇರಿಯಲ್ಲೇ ಕೆಲಸ ಕೊಡಿಸಿ, ಸೇರಿದ ದಿನವೇ ಬೋನಸ್ ಕೊಡುವುದೆಲ್ಲ ನೋಡಿದರೆ ಈ ಧಾರಾವಾಹಿ 2–3 ವರ್ಷಗಳಿಂದ ನಡೆಯುತ್ತಿರುವ ಅನೇಕ ಧಾರಾವಾಹಿಗಳಿಗಿಂತ ಶೀಘ್ರದಲ್ಲಿ ಮುಕ್ತಾಯವಾಗಲಿ ಎಂದು ಆಶಿಸೋಣ. ಇದರ ನಾಯಕ–ನಾಯಕಿಯರು ಚೆನ್ನಾಗಿ ನಟಿಸಿದ್ದಾರೆ.

–ಶರ್ಮಿಷ್ಟ ರಘು, ಬೆಂಗಳೂರು

ವಾರದ ಪತ್ರ

## ಬೋರ್ ಟಾಕೀಸ್

‘ಕಲರ್ಸ್ ಸೂಪರ್’ನಲ್ಲಿ ಸೃಜನ್ ಲೋಕೇಶ್ ನಡೆಸಿಕೊಡುತ್ತಿರುವ ‘ಮಜಾ ಟಾಕೀಸ್’ ಮಜಾ ಕೊಡದೇ ಹಾಸ್ಯಾಸ್ಪದವಾಗಿ ಬೇಜಾರಾಗುತ್ತದೆ.

ಸೃಜನ್ ಏಕಾಧಿಕಾರದ ಮಾತು, ಇನ್ನೊಬ್ಬರನ್ನು ಹೀಯಾಳಿಸುವ, ಹಂಗಿಸುವ, ಅಪಹಾಸ್ಯ ಮಾಡುವ ಮಾತುಗಳೇ ಹೆಚ್ಚಿದೆ. ಸಹ ಕಲಾವಿದರ ಜೊತೆಯ ಸಂಭಾಷಣೆಗಳು ಅಸಭ್ಯವಾಗಿ ಒಮ್ಮೊಮ್ಮೆ ಅತಿರೇಕವೆನಿಸುತ್ತದೆ. ಮಕ್ಕಳೊಡನೆ, ಕುಟುಂಬದವರೊಡನೆ ವೀಕ್ಷಿಸಲು ಮುಜುಗರವೆನಿಸುತ್ತದೆ. ಅತಿಥಿಗಳನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿ, ಅವರನ್ನು ಕಾರ್ಯಕ್ರಮದಲ್ಲಿ ಪೂರ್ತಿ ಭಾಗಿಯಾಗಲು ಬಿಡದೆ ಸೃಜನ್‌ರವರು ತಮ್ಮದೇ ಅರ್ಥವಿಲ್ಲದ ವ್ಯಾಖ್ಯಾನ ನೀಡುತ್ತಿರುತ್ತಾರೆ.

ಆಹ್ವಾನಿತರಿಗೆ ‘ನೀವು ಏನ್ ದಬ್ಬಾಕಿದ್ರಿ?’ ಎಂದು ಪ್ರಶ್ನೆ ಕೇಳುವ ರೀತಿ ಸಭ್ಯತೆಯ ಲಕ್ಷಣವಲ್ಲ. ಕೆಲವೊಮ್ಮೆ ಅತಿಥಿಗಳ ಸಿನಿಮಾದ ಬಗ್ಗೆ ಅಪಹಾಸ್ಯ ಮಾಡುತ್ತಾರೆ. ವೇದಿಕೆಯಲ್ಲಿ ಸಹ ಕಲಾವಿದರೊಡನೆ ‘ಮಚ್ಚು ತಗೊಳ್ರೋ’ ‘ಹೊಗೆ ಹಾಕಿಸ್ಕೋ’ ಮುಂತಾದ ಅಪಹಾಸ್ಯದ ಸಂಭಾಷಣೆಗಳು ವಿಪರೀತಕ್ಕೇರಿ ಮಾಡುತ್ತವೆ. ನಡೆ ನುಡಿಯಲ್ಲಿ ಸೃಜನಶೀಲತೆ, ಸಭ್ಯತೆ, ನಯ ವಿನಯವಿದ್ದರೆ ಚೆನ್ನ. ಇನ್ನು ಮುಂದಾದರೂ ತಮ್ಮ ನಡತೆಯನ್ನು ಸುಧಾರಿಸಿಕೊಳ್ಳುವರೆಂದು ನಮ್ಮ ಭಾವನೆ.

ಅತಿಥಿಗಳಿಗೆ ಗಿಡಗಳನ್ನು ಕೊಟ್ಟು ‘ಮರ ಬೆಳೆಸಿ, ಪರಿಸರ ಉಳಿಸಿ, ಕನ್ನಡ ಸಿನಿಮಾಗಳನ್ನು ಸಿನಿಮಾ ಮಂದಿರದಲ್ಲೇ ನೋಡಿ’ ಎನ್ನುವ ಎರಡು ಸಂದೇಶಗಳು ಶ್ಲಾಘನೀಯ.

–ಶುಭಾ ದಿವಾಕರ್, ಬೆಂಗಳೂರು

## ಖುಷಿ ಕೊಟ್ಟ ‘ಕುಸುಮ’

ಹಲವು ವಾಹಿನಿಗಳ ಸ್ಪರ್ಧೆಯ ಮಧ್ಯೆಯೂ, ಚಂದನ ವಾಹಿನಿಯಲ್ಲಿ ಕನ್ನಡ ಸಾಹಿತ್ಯದ ಉತ್ತಮ ಕಥೆಗಳನ್ನು ಚಿತ್ರರೂಪದಲ್ಲಿ ಪರಿಚಯಿಸುವ ಸುಂದರ ಕಾರ್ಯಕ್ರಮ ಕಥಾ ಸರಿತ. ದಿನಾಂಕ 24–9–2019 ರಿಂದ 27–9–2019ರ ವರೆಗೆ (ಒಟ್ಟು ನಾಲ್ಕು ಕಂತುಗಳಲ್ಲಿ) ದೇವನೂರ ಮಹಾದೇವ ಅವರ ಪ್ರಸಿದ್ಧ ಕಾದಂಬರಿ ‘ಕುಸುಮ ಬಾಲೆ’ ಚಿತ್ರರೂಪದಲ್ಲಿ ಪ್ರಸಾರವಾಯಿತು. ಗಿರೀಶ ಕಾರ್ನಾಡ ಅವರ ಪರಿಕಲ್ಪನೆ ಮತ್ತು ನಿರ್ದೇಶನದಲ್ಲಿ ಸುಂದರ ಕಾದಂಬರಿಯನ್ನು ಚಿತ್ರ ರೂಪದಲ್ಲಿ ವೀಕ್ಷಕರಿಗೆ ತೋರಿಸಲಾಯಿತು. ಇಂತಹ ಉತ್ತಮ ಸಾಹಿತ್ಯಿಕ ಕಾರ್ಯಕ್ರಮಗಳು ಇನ್ನಷ್ಟು ಬರಲಿ ಎಂದು ಆಶಿಸೋಣ.

–ಕೆ.ಪಿ. ರಾಮಗುಂಡಿ, ಬೈಲಹೊಂಗಲ

## ಪುರಸ್ಕಾರ ಮೌಲ್ಯ

ಕಲರ್ಸ್‌ನ ‘ಅನುಬಂಧ’ ಪ್ರಶಸ್ತಿಯನ್ನು ಆರು ವರ್ಷದಿಂದ ತೆಗೆದುಕೊಂಡವರೇ ಮತ್ತೆ ಪಡೆಯುವುದು ಹಾಸ್ಯಾಸ್ಪದ. ಕುಟುಂಬದ ಬೇರೆಯವರು ಅವರ ಕಣ್ಣಿಗೆ ಕಾಣುವುದಿಲ್ಲವೇ? ನಾಯಕ/ನಾಯಕಿಯರೇ ಮುಖ್ಯರೇ? ‘ರಾಧಾ ರಮಣ’ದಲ್ಲಿ ರಮಣನ ಕಚೇರಿಯ ಗೆಳೆಯ ಲಾಯರ್ ಆರು ವರ್ಷದಿಂದ ರಮಣನ ಜೊತೆಯಲ್ಲಿ ಇದ್ದಾನೆ. ಅವನ ನಟನೆ ಕೂಡ ಚೆನ್ನಾಗಿದೆ. ಬಹಳ ಮೃದು ಸ್ವಭಾವದ ಪಾತ್ರ ಅವನಿಗೆ ಬೆಸ್ಟ್ ಸಪೋರ್ಟೆಡ್ ಅವಾರ್ಡ್ ಕೊಡಬಹುದಿತ್ತಲ್ಲವೇ? ಒಂದು ಧಾರಾವಾಹಿಯನ್ನು ಆರು ತಿಂಗಳಲ್ಲಿ ಮುಗಿಸಿ ಅವಾರ್ಡ್ ನೀಡಿದರೆ ಅದಕ್ಕೊಂದು ಮೌಲ್ಯ ಬಂದೀತು.

–ಎನ್.ಎಸ್. ಚಂದ್ರಶೇಖರ್ ಬೆಂಗಳೂರು

## ವಿಪರ್ಯಾಸ

ಝೀ ಚಾನಲ್‌ನ ‘ಸುಬ್ಬಲಕ್ಷ್ಮೀ ಸಂಸಾರ’ದ ಗುರುಮೂರ್ತಿ ಬದಲಾಗಿ ಬಂದ ರೀತಿಯಲ್ಲೇ ‘ಸುಬ್ಬಿ’ಯ ಮಾವನಾಗಿ ಉಳಿದಿದ್ದರೆ ಶೀರ್ಷಿಕೆ ಗೀತೆಗೂ ಒಂದು ಬೆಲೆ ಇರುತ್ತಿತ್ತು. ‘ಅಂದದ ಚೆಂದದ ಸಂಸಾರ’ ಎಂದು. ಆದರೆ ಶನಾಯಾಳ ಶ್ಯಾರಿಯಾಗಿ ಸುಬ್ಬಲಕ್ಷ್ಮಿಯ ಮೇಲೆ ಸೇಡು ತೀರಿಸಿಕೊಳ್ಳಲು ಬಂದಿರುವುದು ವಿಪರ್ಯಾಸವೇ ಹೌದು.

–ಎಸ್. ವಿಜಯಕುಮಾರಿ, ಬೆಂಗಳೂರು

## ಶೀರ್ಷಿಕೆ ಆಕರ್ಷಕವಾಗಿರಲಿ

ರಾಜಕಾರಣಿಗಳನ್ನು ತನಿಖಾ ಸಂಸ್ಥೆಗಳು ಬಂಧಿಸಿದಾಗ, ಕೆಲವು ಸುದ್ದಿವಾಹಿನಿಗಳು ಅತಿಯಾಗಿ ಸಂಭ್ರಮಿಸಿದಂತೆ ಕಂಡಿತು. ರಂಜಿತ ವರದಿಗಳನ್ನು ನೀಡುವಾಗ ದೈನೇಶಿ ಡಿಕೆ, ಕಂಬಿಯ ಹಿಂದೆ ಚಿದು, ಡಿಕೆ ಮುದ್ದೆ ಮುರಿಯುತ್ತಾರೆಯೇ? ಸರಪಳಿಯಲ್ಲಿ ಚಿದು, ತಾವು ಉದ್ಘಾಟಿಸಿದ ಸೆಲ್‌ಗೆ ತಾವೇ? ಟ್ರಬಲ್ ಶೂಟರ್ ಟ್ರಬಲ್‌ನಲ್ಲಿ ಮುಂತಾದ ಶೀರ್ಷಿಕೆಗಳನ್ನು ನೀಡಿ ವರದಿ ಮಾಡಿದ್ದು ಬಹುಜನರಿಗೆ ಇಷ್ಟವಾಗಲಿಲ್ಲ. ಬಂಧಿಸಲ್ಪಟ್ಟವರು ಆರೋಪಿಗಳೇ ವಿನಹ ಅಪರಾಧಿಗಳಲ್ಲ. ಕೊಲೆ ಕಳ್ಳತನ ಆರೋಪ ಹೊತ್ತವರೂ ಅಲ್ಲ. ಇನ್ನೂ ಸಾಬೀತಾಗಬೇಕಾದ ಆರ್ಥಿಕ ಅಪರಾಧಗಳು ಅವರನ್ನು ಅಪರಾಧಿಗಳಂತೆ ಟ್ರೀಟ್ ಮಾಡಿದ್ದು ಸರಿಯಲ್ಲ.

– ರಮಾನಂದ ಶರ್ಮಾ, ಬೆಂಗಳೂರು

## ಏಕ ರೂಪ

‘ಮಿಥುನರಾಶಿ’, ‘ಇವಳೂ ಸುಜಾತ’, ‘ಮಂಗಳ ಗೌರಿ’, ‘ರಾಧಾ ರಮಣ’ ಈ ಕಥೆಗಳಲ್ಲಿರುವ ಹೆಂಗಸರು ಮನೆಯ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತಿದ್ದಾರೆ. ‘ಮಿಥುನ ರಾಶಿ’ ‘ಸುಜಾತ’ದ ಮಕ್ಕಳು ಪೆದ್ದು, ತಿಳಿವಳಿಕೆ ಕಮ್ಮಿ ಇರುವ ಮತ್ತು ನಯವಂಚಕ ಹೆಂಡತಿಯರಿರುವ ಮೈದುನರು. ನಾಲ್ಕೂ ಧಾರಾವಾಹಿಗಳಲ್ಲಿ ಮನೆಯ ಹೆಣ್ಣು ಮಕ್ಕಳು/ ಸೊಸೆಯಂದಿರು ಹಣಕ್ಕಾಗಿ ಏನು ಮಾಡಲೂ ಸರಿ. ಕೊಲೆ, ಸುಲಿಗೆ, ಕಳ್ಳತನ ಅಥವಾ ಗೂಂಡಾಗಳನ್ನೂ ಸಾಕಿಕೊಂಡಿದ್ದಾರೆ. ರಂಗನಾಯಕಿಯಲ್ಲೂ ಇದೇ ಕಥೆ.

–ಶಾಂತಾ ನಾಗರಾಜ್ ಕೆ. ಬೆಂಗಳೂರು